# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-3, ಸಂಚಿಕೆ-2 ತ್ರೈಮಾಸಿಕ, ಏಪ್ರಿಲ್-ಜೂನ್ 2016 ಪುಟಗಳು-12

## ಇನ್ವೆಸ್ಟ್ ಕರ್ನಾಟಕ: ಇಂಧನ ಇಲಾಖೆಯದೆ ಸಿಂಹಪಾಲು
















- ಬೆಸ್ಕಾಂ ಉದ್ಯೋಗಿಗಳಿಗೆ ವರ್ಚುಯಲ್ ಲೈಬ್ರರಿ...
- ತುಮಕೂರಿನಲ್ಲಿ ಎಚ್‌ವಿಡಿಎಸ್ ಯೋಜನೆ...
- ಎಲ್‌ಇಡಿ ಅಭಿಯಾನದ ಫೋಟೋ ಸೆಷನ್....

.....ಇನ್ನು ಹಲವು ವಿಷಯಗಳೊಂದಿಗೆ

## ಬೆಸ್ಕಾಂ ನಿಗಮ ಕಚೇರಿಯಲ್ಲಿ ಆಯೋಜಿಸಲಾಗಿದ್ದ 67ನೇ ಗಣರಾಜ್ಯೋತ್ಸವದ ಧ್ವಜಾರೋಹಣದ ಚಿತ್ರಗಳು





## ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮದ ಚಿತ್ರಗಳು














# ವ್ಯವಸ್ಥಾಪಕ ನಿರ್ದೇಶಕರ ಸಂದೇಶ



**ಪಂಕಜ್‌ಕುಮಾರ್ ಪಾಂಡೆ**
ವ್ಯವಸ್ಥಾಪಕ ನಿರ್ದೇಶಕರು

ಆತ್ಮೀಯ ಸಹೋದ್ಯೋಗಿಗಳೇ,

ತಮಗೆಲ್ಲರಿಗೂ ತಿಳಿದಿರುವಂತೆ ಕಳೆದ ವರ್ಷ ನೀರಿಕ್ಷಿಸಿದಷ್ಟು ಮಳೆಯಾಗಲಿಲ್ಲ. ಹೀಗಾಗಿ ಜಲವಿದ್ಯುತ್ ಉತ್ಪಾದನೆ ಕುಂಠಿತಗೊಂಡಿತ್ತು. ಮತ್ತೊಂದೆಡೆ ಹಲವು ವಿದ್ಯುತ್ ಉತ್ಪಾದನಾ ಘಟಕಗಳು ವಾರ್ಷಿಕ ನಿರ್ವಹಣೆಯ ಕಾರಣಗಳಿಂದಾಗಿ ಸಾಮರ್ಥ್ಯಕ್ಕೆ ತಕ್ಕಷ್ಟು ವಿದ್ಯುತ್ ಅನ್ನು ಉತ್ಪಾದಿಸಲಿಲ್ಲ. ಇಷ್ಟೆಲ್ಲಾ ತಾಂತ್ರಿಕ ತೊಂದರೆಗಳಿದ್ದಾಗ್ಯೂ ನೀವುಗಳು ಗ್ರಾಹಕರಿಗೆ ಉತ್ತಮ ಸೇವೆ ನೀಡುತ್ತಿರುವುದು ಶ್ಲಾಘನೀಯ. ಇನ್ನು ನಾವು ಬೇಸಿಗೆ ಕಾಲಕ್ಕೆ ಸಜ್ಜಾಗಬೇಕಿದೆ.

ಕಳೆದ ವರ್ಷದ ಬೇಸಿಗೆಯಲ್ಲಿ ದಾಖಲಾದ ಬೆಸ್ಕಾಂನ ಗರಿಷ್ಠ ಬೇಡಿಕೆ 4605 ಮೆ.ವಾ. ನಷ್ಟು, ಆದರೆ 2016ರ ಮಾರ್ಚ್ ತಿಂಗಳಿನಲ್ಲಿ ಈಗಾಗಲೇ 4765 ಮೆ.ವಾ. ನಷ್ಟು ಪೀಕ್ ಲೋಡ್ ದಾಖಲಾಗಿದೆ. ಈ ಅಂಕಿ ಅಂಶಗಳನ್ನು ನೋಡಿದಾಗ ಇನ್ನೂ ಮುಂದಿನ ಎರಡು ತಿಂಗಳಿನಲ್ಲಿ ವಿದ್ಯುತ್ ಬೇಡಿಕೆಯ ಪ್ರಮಾಣ ಸಾಕಷ್ಟು ಹೆಚ್ಚಾಗಲಿದೆ ಎಂಬುದನ್ನು ಅಂದಾಜಿಸಬಹುದು. ಜಲ ವಿದ್ಯುತ್ ಉತ್ಪಾದನೆ ಪ್ರಮಾಣ ಕಡಿಮೆಗೊಂಡಿದ್ದರೂ ಕೂಡ ಅಗತ್ಯವಿದ್ದಷ್ಟು ಪ್ರಮಾಣದ ವಿದ್ಯುತ್‌ಅನ್ನು ವಿವಿಧ ಮೂಲಗಳಿಂದ ಒಟ್ಟುಗೂಡಿಸಿ ಬೇಡಿಕೆ ಮತ್ತು ಪೂರೈಕೆಯನ್ನು ಸರಿದೂಗಿಸಲಾಗುತ್ತಿದೆ.

ಬಿಟಿಪಿಎಸ್‌ನ ಮೂರನೇ ಯೂನಿಟ್ ಹಾಗೂ ಯರಮರಸ್ ಥರಮಲ್ ಸ್ಟೇಷನ್ನುಗಳಿಂದ ಬೆಸ್ಕಾಂಗೆ 400 ಮೆ.ವಾ.ನಷ್ಟು ವಿದ್ಯುತ್ ಏಪ್ರಿಲ್ ಮೊದಲವಾರದಲ್ಲಿ ಲಭ್ಯವಾಗಲಿದೆ. ಇದಲ್ಲದೆ ದಾಮೋದರ್ ವ್ಯಾಲಿ ಕಾರ್ಪೋರೇಷನಿಂದಲೂ 227 ಮೆ.ವಾ. ವಿದ್ಯುತ್ ಬೆಸ್ಕಾಂಗೆ ದೊರೆಯುತ್ತಿದೆ. ಇನ್ನು ವಿದ್ಯುತ್ ಉತ್ಪಾದನಾ ಸ್ಟೇಷನ್ನುಗಳನ್ನು ಹೊರತುಪಡಿಸಿ ಮುಕ್ತಮಾರುಕಟ್ಟೆಯಿಂದಲೂ ವಿದ್ಯುತ್ ಅನ್ನು ಖರೀದಿಸಿ ಸರಬರಾಜು ಮಾಡಲಾಗುತ್ತಿದೆ.. ಹೀಗಾಗಿ ಬೇಸಿಗೆ ಕಾಲದಲ್ಲಿ ವಿದ್ಯುತ್ ಅನ್ನು ಸಮರ್ಪಕವಾಗಿ ಗ್ರಾಹಕರಿಗೆ ವಿದ್ಯುತ್ ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಇನ್ನು ಮಿತವಾಗಿ ವಿದ್ಯುತ್ ಬಳಸುವ ಕುರಿತು ಗ್ರಾಹಕರಲ್ಲಿ ಜಾಗೃತಿ ಮೂಡಿಸುವ ವಿಷಯಕ್ಕೆ ಬಂದರೆ, ಇಲಾಖೆಯಲ್ಲಿ ಗ್ರಾಹಕರೊಂದಿಗೆ ನೇರ ಸಂಪರ್ಕಹೊಂದಿರುವವರು ವಿಭಾಗ/ಉಪವಿಭಾಗದ ಕಾರ್ಯಾಚರಣೆ ಮತ್ತು ನಿರ್ವಹಣೆಯ ಅಧಿಕಾರಿಗಳು/ಸಿಬ್ಬಂದಿಗಳು. ಪ್ರತಿ ತಿಂಗಳು ಮೀಟರ್ ಓದಲೆಂದೊ, ವಿದ್ಯುತ್ ಸರಬರಾಜಿನಲ್ಲಿ ಉಂಟಾದ ಅಡಚಣೆಗಳ ನಿವಾರಿಸಲೆಂದೊ ನೀವುಗಳು ಗ್ರಾಹಕರನ್ನು ಆಗಿಂದಾಗ ಭೇಟಿಯಾಗುತ್ತಿರುತ್ತೀರಿ. ಇದಲ್ಲದೆ ವಿಭಾಗ/ಉಪವಿಭಾಗದಲ್ಲಿ ಆಯೋಜಿಸಲಾಗುವ ಗ್ರಾಹಕ ಸಂಪರ್ಕ ಸಭೆ ಅಥವಾ ಬಿಲ್ ಪಾವತಿಸಲು ಕಛೇರಿಗೆ ಬರುವ ಗ್ರಾಹಕರೊಂದಿಗೆ ನೀವು ನೇರ ಸಂಪರ್ಕದಲ್ಲಿರುತ್ತೀರಿ. ಪೀಕ್ ಅವರ್‌ನಲ್ಲಿ ವಿದ್ಯುತ್ ಸದ್ಬಳಕೆಯ ಕುರಿತು ಗ್ರಾಹಕರಲ್ಲಿ ಜಾಗೃತಿ ಮೂಡಿಸುವಲ್ಲಿ ನಿಮ್ಮ ಪಾತ್ರ ಮಹತ್ತರವಾದದ್ದು. ಅತ್ಯವಶ್ಯಕವಾದ ವಿದ್ಯುತ್ ಉಪಕರಣಗಳನ್ನು ಹೊರತುಪಡಿಸಿ ಇತರೆ ಉಪಕರಣಗಳಾದ ಎಸಿ, ವಾಷಿಂಗ್ ಮಷೀನ್, ವ್ಯಾಕ್ಯೂಮ್ ಕ್ಲೀನರ್‌ನಂಥ ಉಪಕರಣಗಳನ್ನು ಪೀಕ್ ಅವರ್‌ನಲ್ಲಿ ಬಳಸದಂತೆ ಗ್ರಾಹಕರಿಗೆ ತಿಳುವಳಿಕೆ ನೀಡಿ. ನಿಯಮಿತವಾದ ಬಳಕೆ-ಅನಿಯಮಿತ ವಿದ್ಯುತ್ ಪೂರೈಕೆ ನಮ್ಮ ಗುರಿಯಾಗಿರಲಿ.

ನಿಮ್ಮೆಲ್ಲರಿಗೂ ಯುಗಾದಿ ಹಬ್ಬದ ಶುಭಾಶಯಗಳು.

# ಸಂಪಾದಕೀಯ...



ಆತ್ಮೀಯರೇ,

ನಾವೀಗ ಬೇಸಿಗೆ ಕಾಲಕ್ಕೆ ಕಾಲಿಟ್ಟಿದ್ದೇವೆ. ಅದರಲ್ಲೂ ಏಪ್ರಿಲ್ ಮತ್ತು ಮೇ ತಿಂಗಳುಗಳು ಕಡು ಬೇಸಿಗೆಗೆ ಹೆಸರಾದವು ಎಂಬುದು ತಮಗೆ ಗೊತ್ತಿದೆ. ವಸಂತ ಋತುವಿನ ಚೈತ್ರ ಮತ್ತು ವೈಶಾಖ ಮಾಸಗಳು ಮಾವು-ಬೇವುಗಳ ಚಿಗುರಿನ ಜತೆಗೆ ಇಡೀ ಪ್ರಕೃತಿಯೇ ಹಸಿರು ಹೊನ್ನಾಗಿ ಕಂಗೊಳಿಸುವ ದಿನಗಳು.

ಅದಕ್ಕೆ ಪೂರಕವಾಗಿ ಬೇಸಿಗೆಯ ಮಳೆ ಆಗಾಗ್ಗೆ ಬಿದ್ದು ತಂಪು ಮಾಡಿದಾಗ ಮಾತ್ರ ಹಸಿರು ಹೊದಿಕೆಯನ್ನು ನಿರೀಕ್ಷಿಸಬಹುದು. ಆದರೆ ಇತ್ತೀಚಿನ ವರ್ಷಗಳಲ್ಲಿ ಮಳೆಯ ಪ್ರಮಾಣ ಕಡಿಮೆಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಹಿಂದಿನ ವರ್ಷಗಳಲ್ಲಿ ಬೇಸಿಗೆಯ ಮಳೆ ಕೂಡ ಸಾಕಷ್ಟು ಬೀಳುತ್ತಿದ್ದುದರಿಂದ ಬಿಸಿಲ ಧಗೆಯಿಂದ ಸ್ವಲ್ಪಮಟ್ಟಿನ ಬಿಡುವು ದೊರೆಯುತ್ತಿತ್ತು. ಈಗ ಪರಿಸ್ಥಿತಿ ಹಾಗಿಲ್ಲ. ಬೇಸಿಗೆ ಬಂತೆಂದರೆ ಹಳ್ಳ, ಕೊಳ್ಳಗಳು, ನದಿಗಳು ನೀರಿಲ್ಲದೆ ಒಣಗುತ್ತವೆ. ಪರಿಣಾಮವಾಗಿ ಜಲಾಶಯಗಳಲ್ಲಿ ನೀರಿನ ಕೊರತೆ ಉಂಟಾಗುತ್ತದೆ.

ಇದರಿಂದ ಜಲವಿದ್ಯುತ್ ಉತ್ಪಾದನೆ ಕುಂಠಿತಗೊಳ್ಳುತ್ತದೆ. ತೀವ್ರವಾಗಿ ವಿದ್ಯುತ್ ಕೊರತೆ ಎದುರಿಸುವ ಸವಾಲು 'ಬೆಸ್ಕಾಂ'ಗೆ ಎದುರಾಗುತ್ತದೆ. ವಿದ್ಯುತ್ ಸರಬರಾಜಿಗೆ ಸಂಬಂಧಿಸಿದಂತೆ 'ಸಂಕಷ್ಟ ಕಾಲ' ಎಂದೇ ಬಿಂಬಿತವಾಗಿರುವ ಈ ಸಂದರ್ಭವನ್ನು ಸವಾಲಾಗಿ ಸ್ವೀಕರಿಸಿ ಎದುರಿಸಬೇಕಾಗುತ್ತದೆ. ಲಭ್ಯವಿರುವ ವಿದ್ಯುತ್ ಅನ್ನು ಸರಿದೂಗಿಸಿ ಸರಬರಾಜು ಮಾಡುವ ಜವಾಬ್ದಾರಿ ನಮ್ಮ ಮೇಲೆ ಇದೆ. ಬೆಸ್ಕಾಂ ಅಧಿಕಾರಿಗಳು ಮತ್ತು ನೌಕರರು ಈ ನಿಟ್ಟಿನಲ್ಲಿ ಸಾಮೂಹಿಕವಾಗಿ ಕಾರ್ಯ ನಿರ್ವಹಿಸುವುದು ಅನಿವಾರ್ಯ. ವಿದ್ಯುತ್‌ಗೆ ಸಂಬಂಧಿಸಿದಂತೆ ಸಾರ್ವಜನಿಕರ ದೂರುಗಳನ್ನು ಸಹನೆಯಿಂದ ಸ್ವೀಕರಿಸಿ ಪರಿಹಾರ ದೊರಕಿಸುವುದಕ್ಕೆ ಆದ್ಯತೆ ನೀಡಬೇಕು.

ಬೇಸಿಗೆ ಮಳೆ ಚೆನ್ನಾಗಿ ಬಂದರೆ ಕೃಷಿ ಪಂಪ್‌ಸೆಟ್‌ಗಳಿಗೆ ಸ್ವಲ್ಪ ಮಟ್ಟಿನ ವಿರಾಮ ದೊರೆಯಬಹುದು. ಆಗ ಮನೆ ಬಳಕೆ ವಿದ್ಯುತ್ ಸರಬರಾಜಿನಲ್ಲಿ ಸುಧಾರಣೆಯಾಗಬಹುದು. ಆದರೆ ಇದೆಲ್ಲವೂ ನಿಸರ್ಗದ ಕೊಡುಗೆಯನ್ನು ಅವಲಂಬಿಸಿದೆ.

ಏನೇ ಆಗಲಿ ನಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಬೇಕಿದೆ. ರಾಜ್ಯದಲ್ಲಿ ಎಲ್‌ಇಡಿ ಬಲ್ಬ್‌ಗಳ ಬಳಕೆ ಕುರಿತಂತೆ ಆರಂಭಿಸಿರುವ ಜನಜಾಗೃತಿ ಅಭಿಯಾನಕ್ಕೆ ಬೆಸ್ಕಾಂ ವ್ಯಾಪ್ತಿಯಲ್ಲಿ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಈ ಅಭಿಯಾನವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮುಂದುವರಿಸಲು ಸಿಬ್ಬಂದಿ ಹಾಗೂ ಅಧಿಕಾರಿಗಳ ಸಹಕಾರ ಮುಖ್ಯ.

ನಿಮ್ಮೆಲ್ಲರಿಗೂ ಯುಗಾದಿ ಹಬ್ಬದ ಶುಭಾಶಯಗಳು.

ಸಂಪಾದಕಿ
**ಎನ್. ಜಯಂತಿ**
ಪ್ರಧಾನ ವ್ಯವಸ್ಥಾಪಕರು (ಗ್ರಾ & ಸಂ), ಬೆಸ್ಕಾಂ

# ತಾಂತ್ರಿಕ ನಿರ್ದೇಶಕರ ಸಂದೇಶ



**ಎಚ್. ನಾಗೇಶ್**
ತಾಂತ್ರಿಕ ನಿರ್ದೇಶಕರು

ಪ್ರೀತಿಯ ಸಹೋದ್ಯೋಗಿಗಳೇ,

ವಿದ್ಯುತ್ ನಮ್ಮ ನಿಮ್ಮೆಲ್ಲರ ಹಾಗೂ ಇಡೀ ಸಮುದಾಯದ ದಿನನಿತ್ಯದ ಅಗತ್ಯಗಳಲ್ಲಿ ಒಂದು. ಈ ಹಿನ್ನೆಲೆಯಲ್ಲಿ ನಮ್ಮ ಗ್ರಾಹಕರಿಗೆ ಗುಣಮಟ್ಟದ ಮತ್ತು ನಿರಂತರ ವಿದ್ಯುತ್ ಪೂರೈಕೆಯ ಬಹು ದೊಡ್ಡ ಜವಾಬ್ದಾರಿ ನಮ್ಮ ಮೇಲಿದೆ.

ದಿನೇ ದಿನೇ ಬಿಸಿಲಿನ ಧಗೆ ಹೆಚ್ಚುತ್ತಿದೆ. ಈ ಬಾರಿ ಬೆಂಗಳೂರಿನ ತಾಪಮಾನ 40 ಡಿಗ್ರಿ ಸೆಲ್ಸಿಯಸ್ ದಾಟಬಹುದೆಂದು ಹವಾಮಾನ ಇಲಾಖೆ ಅಂದಾಜಿಸಿದೆ. ಸಾಮಾನ್ಯವಾಗಿ ಏಪ್ರಿಲ್–ಮೇ ತಿಂಗಳಿನಲ್ಲಿರುವ ಉಷ್ಣಾಂಶ ಮಾರ್ಚಿಯಲ್ಲಿ ಕಂಡುಬಂದಿರುವುದು ಪರಿಸ್ಥಿತಿಯ ತೀವ್ರತೆಗೆ ಸಾಕ್ಷಿಯಾಗಿದೆ. ಬಿಸಿಲ ಧಗೆ ಹೆಚ್ಚಿದಂತೆ ವಿದ್ಯುತ್ ಬೇಡಿಕೆ ಕೂಡ ಹೆಚ್ಚಾಗುತ್ತಿದೆ. ಈ ಸಂದರ್ಭದಲ್ಲಿ ನಾವು ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸಲು ಸಜ್ಜಾಗ ಬೇಕಾಗುತ್ತದೆ.

ಹಾಲಿ ಇರುವ ವಿದ್ಯುತ್ ಸರಬರಾಜು ಲೈನ್‌ಗಳು, ಪರಿವರ್ತಕಗಳು ಹಾಗೂ ಫೀಡರ್‌ಗಳು ತಮ್ಮದೆಯಾದ ಸೀಮಿತ ಸಾಮರ್ಥ್ಯ ಹೊಂದಿರುತ್ತವೆ. ಬೇಸಿಗೆಯಲ್ಲಿ ವಿದ್ಯುತ್ ಬಳಕೆ ಹೆಚ್ಚಾದಂತೆ ಸರಬರಾಜು ಜಾಲದ ಮೇಲೆ ಒತ್ತಡ ಹೆಚ್ಚುತ್ತದೆ. ಇನ್ನು ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಚಟುವಟಿಕೆಗೆ ನೀರಿನ ಅವಶ್ಯಕತೆ ಹೆಚ್ಚುವುದರಿಂದ ಕೃಷಿ ಪಂಪ್‌ಸೆಟ್‌ಗಳು ನಿರಂತರ ಬಳಕೆಗೆ ಅಣಿಯಾಗುತ್ತವೆ. ಈ ಹಿನ್ನೆಲೆಯಲ್ಲೂ ಕೂಡ ವಿದ್ಯುತ್ ಬೇಡಿಕೆ ಹೆಚ್ಚಾಗುತ್ತದೆ. ಇದನ್ನು ಮನಗಂಡು ನಾವು ಲಭ್ಯವಿರುವ ವಿದ್ಯುತ್ ಅನ್ನು ಸಮರ್ಪಕವಾಗಿ ಸರಬರಾಜು ಮಾಡಬೇಕಾಗುತ್ತದೆ. ವಿಶೇಷವಾಗಿ ಮಾರ್ಚಿ, ಏಪ್ರಿಲ್ ತಿಂಗಳಿನಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಪರೀಕ್ಷೆಯ ಸಮಯ. ನಿಮ್ಮ ಕಾರ್ಯಕ್ಷೇತ್ರದಲ್ಲಿ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಉಂಟಾದರೆ ತಕ್ಷಣವೇ ಕಾರ್ಯಪ್ರವೃತ್ತರಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಎಚ್ಚರವಹಿಸಿ.

ವಿಭಾಗ/ಉಪವಿಭಾಗದ ಕಾರ್ಯಾಚರಣೆ ಹಾಗೂ ನಿರ್ವಹಣೆಯ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗಳಿಗೆ ವ್ಯವಸ್ಥಾಪಕ ಮಂಡಳಿ ಅಗತ್ಯವಿರುವ ಸಿಬ್ಬಂದಿ ಹಾಗೂ ಸಲಕರಣೆಗಳನ್ನು ಈಗಾಗಲೇ ಪೂರೈಸಿದೆ. ವಿದ್ಯುತ್ ಸರಬರಾಜಿನಲ್ಲಿ ತೊಂದರೆಗಳುಂಟಾದಲ್ಲಿ ಸಹಾಯವಾಗಲೆಂದು ಅಗತ್ಯ ವಾಹನಗಳು, ಕ್ರೇನ್‌ಗಳನ್ನು ಕೂಡ ವ್ಯವಸ್ಥೆ ಮಾಡಲಾಗಿದೆ. ರೈತರಿಗೆ ತಕ್ಷಣದಲ್ಲೇ ನೆರವು ನೀಡುವ ಉದ್ದೇಶದಿಂದ ಪರಿವರ್ತಕ ಬ್ಯಾಂಕುಗಳನ್ನು, ಮೊಬೈಲ್ ಟ್ರಾನ್ಸಫಾರ್ಮರಗಳ ವ್ಯವಸ್ಥೆಯನ್ನು ಮಾಡಲಾಗಿದೆ. ವಿದ್ಯುತ್ ಸರಬರಾಜಿನ ಹೊಣೆಯ ನಡುವೆ ನಿಮ್ಮ ಸುರಕ್ಷತೆಯನ್ನು ಕಡೆಗಣಿಸದಿರಿ. ವಿದ್ಯುತ್ ಲೇನ್‌ಗಳ ದುರಸ್ಥಿ ಮಾಡುವಾಗ ತಪ್ಪದೆ ಸುರಕ್ಷತಾ ಉಪಕರಣಗಳನ್ನು ಬಳಸಿ.

ಇವೆಲ್ಲ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು 24 ಘಂಟೆ ಜಾಗೃತರಾಗಿದ್ದು ಸಿಬ್ಬಂದಿಗಳು ಅಧಿಕಾರಿಗಳು ಒಗ್ಗಟ್ಟಾಗಿ ಕಾರ್ಯನಿರ್ವಹಿಸಿ ಕಂಪನಿಯ ವರ್ಚಸ್ಸನ್ನು ಹೆಚ್ಚಿಸುವ ಹೊಣೆ ನಮ್ಮೆಲ್ಲರ ಮೇಲಿದೆ. ಅಡಚಣೆರಹಿತ ವಿದ್ಯುತ್ ಪೂರೈಕೆಯ ಜವಾಬ್ದಾರಿ ನಮ್ಮೆಲ್ಲರ ಒಗ್ಗಟ್ಟಿನ ಗುರಿಯಾಗಿರಲಿ.

# ಬೆಸ್ಕಾಂ ಉದ್ಯೋಗಿಗಳಿಗಾಗಿ ವರ್ಚುಯಲ್ ಗ್ರಂಥಾಲಯ



ಬೆಸ್ಕಾಂ ತನ್ನ ಗ್ರಾಹಕರ ಅನೂಕೂಲಕ್ಕಾಗಿ ಹತ್ತು ಹಲವು ಯೋಜನೆಗಳನ್ನು ಆಗಿಂದಾಗ ಪರಿಚಯಿಸುತ್ತಲೇ ಇರುತ್ತದೆ. ಈ ಬಾರಿ ತನ್ನ ಉದ್ಯೋಗಿಗಳ ವಿದ್ಯುತ್ ಕ್ಷೇತ್ರದಲ್ಲಿನ ಉನ್ನತ ಕಲಿಕೆಗಾಗಿ ಹೊಸ ವೇದಿಕೆಯೊಂದನ್ನು ಕಲ್ಪಿಸಿದೆ, ಅದುವೇ ವರ್ಚುಯಲ್ ಗ್ರಂಥಾಲಯ (Virtual Library). ವಿದ್ಯುತ್ ಸರಬರಾಜು ಕ್ಷೇತ್ರದ ಹೊಸ ಆವಿಷ್ಕಾರಗಳು, ಪವರ್ ಪಾಯಿಂಟ್ ಪ್ರಸೆಂಟೇಷನ್, ಲೇಖನಗಳು, ಉಪನ್ಯಾಸಗಳು, ವಿಡಿಯೊ ತುಣುಕುಗಳು ಹೀಗೆ ಏನೇ ಹೊಸ ವಿಷಯಗಳಿದ್ದರೂ ಅದು ಇನ್ನು ವರ್ಚುವಲ್ ಲೈಬ್ರರಿಯಲ್ಲಿ ಲಭ್ಯವಾಗಲಿದೆ.

ಬೆಸ್ಕಾಂ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗಾಗಿ ವಿಶೇಷವಾಗಿ ಆರಂಭವಾಗುತ್ತಿರುವ ವರ್ಚುಯಲ್ ಲೈಬ್ರರಿ ನಿಗಮದ ಜಾಲತಾಣ www.bescom.org ದಲ್ಲಿ ಅತ್ಯಂತ ಶೀಘ್ರದಲ್ಲೆ ಲಭ್ಯವಾಗಲಿದೆ. ಬೆಸ್ಕಾಂನ ಅಧಿಕಾರಿಗಳು/ಸಿಬ್ಬಂದಿಗಳಿಗೆ ಬಳಕೆದಾರರ ಗುರುತು ಮತ್ತು ಪಾಸ್‌ವರ್ಡ್‌ನ್ನು ನೀಡಲಾಗಿರುತ್ತದೆ. ಈ ಯೂಸರ್ ಐಡಿ ಹಾಗೂ ಪಾಸ್‌ವರ್ಡ್ ಮೂಲಕ ವರ್ಚುಯಲ್ ಲೈಬ್ರರಿಯ ಉಪಯೋಗ ಪಡೆಯಬಹುದು.

ನಿಗಮದ ಅನೇಕ ವಿಷಯಗಳಿಗೆ ಸಂಬಂಧಿಸಿದ ಪವರ್ ಪಾಯಿಂಟ್ ಪ್ರಸೆಂಟೇಷನ್, ವಿದ್ಯುತ್ ಸರಬರಾಜಿನ ಹೊಸ ಪುಸ್ತಕಗಳು, ಲೇಖನಗಳು, ಇಲಾಖೆಯಿಂದ ನೀಡಲಾಗುವ ಹತ್ತು ಹಲವು ತರಬೇತಿ ಕಾರ್ಯಾಗಾರದ ಮಾಹಿತಿಗಳು ಹೀಗೆ ಹಲವು ಮಹತ್ವದ ವಿಷಯಗಳು ಈ ಗ್ರಂಥಾಲಯದಲ್ಲಿ ಲಭ್ಯವಿದ್ದು ಹೊಸ ಹೊಸ ವಿಷಯಗಳ ಪ್ರಯೋಜನವನ್ನು ಆಸಕ್ತರು ಪಡೆಯಬಹುದು.

...9ನೇ ಪುಟಕ್ಕೆ

# ಇನ್ವೆಸ್ಟ್ ಕರ್ನಾಟಕ: ಇಂಧನ ಇಲಾಖೆಯದೆ ಸಿಂಹಪಾಲು

ಬಹು ನಿರೀಕ್ಷಿತ ಹೂಡಿಕೆ ಸಮಾವೇಶವೆಂದೇ ಕರೆಯಲಾಗಿದ್ದ "ಇನ್ವೆಸ್ಟ್ ಕರ್ನಾಟಕ–2016" ವನ್ನು ಫೆಬ್ರುವರಿ 3,4 ಮತ್ತು 5 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಲಾಗಿತ್ತು.ಈ




ಸಮಾವೇಶದಲ್ಲಿ ದೇಶ, ವಿದೇಶದ ಉದ್ಯಮ ಕ್ಷೇತ್ರದ ದಿಗ್ಗಜರು ಪಾಲ್ಗೊಂಡಿದ್ದು ಹೂಡಿಕೆಗೆ ಕರ್ನಾಟಕವೇ ಪ್ರಶಸ್ತ ಸ್ಥಳವೆಂಬುದು ಮತ್ತೊಮ್ಮೆ ಮನವರಿಕೆಯಾಯಿತು. ಕೇಂದ್ರ ಸಚಿವರುಗಳಾದ ಶ್ರೀ.ಅರುಣ್ ಜೇಟ್ಲಿ, ಶ್ರೀ. ವೆಂಕಯ್ಯನಾಯ್ಡು,ಶ್ರೀ.ನಿತೀನ್ ಗಡ್ಕರಿ, ಸೇರಿದಂತೆ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ, ಇಂಧನ ಸಚಿವರಾದ ಶ್ರೀ.ಡಿ.ಕೆ.ಶಿವಕುಮಾರ್, ಕೈಗಾರಿಕೆ ಸಚಿವರಾದ ಶ್ರೀ.ಆರ್.ವಿ.ದೇಶಪಾಂಡೆ ಹಾಗೂ ಅನೇಕ ಕೇಂದ್ರ ಮತ್ತು ರಾಜ್ಯ ಸಚಿವರುಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದರು.ದೇಶ ವಿದೇಶದ ಉದ್ಯಮ ಕ್ಷೇತ್ರದ ದಿಗ್ಗಜರುಗಳಾದ ರತನ್ ಟಾಟಾ, ಅನಿಲ್‌ಅಂಬಾನಿ,ಕುಮಾರ್‌ಮಂಗಲಂ ಬಿರ್ಲಾ, ಗೌತಮ್ ಅದಾನಿ, ಸಜ್ಜನ್ ಜಿಂದಾಲ್, ಎನ್.ಆರ್.ನಾರಾಯಣ ಮೂರ್ತಿ, ಅಜೀಮ್ ಪ್ರೇಮಜಿ ಈ ಸಮಾವೇಶದ ಪ್ರಮುಖ ಆಕರ್ಷಣೆಯಾಗಿದ್ದರು.

ಮೂರು ದಿನಗಳ ಈ ಸಮಾವೇಶದಲ್ಲಿ 3.08 ಕೋಟಿ ರೂಪಾಯಿ ಬಂಡವಾಳದ ಒಟ್ಟು 121 ಒಪ್ಪಂದಗಳಿಗೆ ಸಹಿಹಾಕಲಾಯಿತು ಹಾಗೂ ರಾಜ್ಯದಲ್ಲಿ ಮುಂಬರುವ ದಿನಗಳಲ್ಲಿ 6.7 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ. ಈ ಜಾಗತಿಕ ಸಮಾವೇಶದಲ್ಲಿ ಇಂಧನಕ್ಷೇತ್ರಕ್ಕೆ ಅತ್ಯಂತ ಹೆಚ್ಚು ಬಂಡವಾಳ ಹರಿದು ಬಂದಿರುವುದು ವಿಶೇಷ.

| ಯಾವ ಕ್ಷೇತ್ರಕ್ಕೆ ಎಷ್ಟು ಹೂಡಿಕೆ (ಕೋಟಿ ರೂಪಾಯಿಗಳಲ್ಲಿ) | |
|---|---|
| ಇಂಧನ | 57,038 |
| ಉಕ್ಕು ಕ್ಷೇತ್ರ | 17,834 |
| ರಿಯಲ್ ಎಸ್ಟೇಟ್ | 8,860 |
| ನಗರಾಭಿವೃದ್ಧಿ | 7,300 |
| ಏರೋಸ್ಪೇಸ್ | 5,670 |
| ಅಹಾರ ಮತ್ತು ಕೃಷಿ | 4,093 |



## ಹೈಬ್ರಿಡ್ ಸೋಲಾರ್ ಆಕರ್ಷಣೆ



ವಿದ್ಯುತ್ ಸಮಸ್ಯೆ ಹೆಚ್ಚಾಗುತ್ತಿರುವ ಈ ದಿನಗಳಲ್ಲಿ ನವೀಕರಿಸಬಹುದಾದ ಇಂಧನಗಳತ್ತ ಗ್ರಾಹಕರು ಗಮನ ಹರಿಸುತ್ತಿದ್ದಾರೆ. ಸೋಲಾರ್ ಫಲಕಗಳು ಬೇಸಿಗೆಯಲ್ಲಿ ಕೊಟ್ಟಷ್ಟು ಫಲವನ್ನು ಚಳಿಗಾಲ ಹಾಗೂ ಮಳೆಗಾಲದಲ್ಲಿ ನೀಡುವುದಿಲ್ಲ. ಇದನ್ನು ಮನಗಂಡೇ ಅಮೆರಿಕಾದ ವಿಂಡ್ಸ್ ಡ್ರೀವ್ ಎಂಬ ಕಂಪನಿ ಹೈಬ್ರಿಡ್ ಸೋಲಾರ್ ಮಿಲ್ ಎಂಬ ಉಪಕರಣವೊಂದನ್ನು ಸಿದ್ಧಪಡಿಸಿದೆ. 1 ಕೆ.ವಿ. ಸಾಮರ್ಥ್ಯದ ಈ ಉಪಕರಣದಿಂದ ನಿತ್ಯ 5 ಯೂನಿಟ್‌ವರೆಗೆ ವಿದ್ಯುತ್ ಉತ್ಪಾದಿಸಬಹುದು.ಮನೆಯ ಟೆರೆಸ್ ಮೇಲೆ 50 ಚ.ಅಡಿ ಜಾಗದಲ್ಲಿ ಅಳವಡಿಸಬಹುದಾದ ಈ ಯಂತ್ರ ಬೇಸಿಗೆಯಲ್ಲಿ ಸೋಲಾರ್ ಜೊತೆಜೊತೆಗೆ ಚಳಿ ಮತ್ತು ಮಳೆಗಾಲದಲ್ಲಿ ಗಾಳಿಯಿಂದ ಪವನ ಶಕ್ತಿಯನ್ನು ಉತ್ಪಾದಿಸುತ್ತದೆ.ಸದ್ಯ ಮಾರುಕಟ್ಟೆಯಲ್ಲಿ ಈ ಉಪಕರಣದ ಬೆಲೆ 1.60 ಲಕ್ಷ ರೂಪಾಯಿಗಳು, ಭಾರತದಲ್ಲೆ ಉಪಕರಣದ ಉತ್ಪಾದನೆ ಆರಂಭವಾದಲ್ಲಿ ಬೆಲೆ 1 ಲಕ್ಷಕ್ಕೆ ಇಳಿಯಲಿದೆ.

# ಬಹು ನಿರೀಕ್ಷಿತ ಸೋಲಾರ್ ಪಾರ್ಕ್



ವಿಶ್ವದ ಪ್ರಥಮ ಸೋಲಾರ್ ಪಾರ್ಕ್ ಸದ್ಯದಲ್ಲೇ ಪಾವಗಡದಲ್ಲಿ ಸ್ಥಾಪಿತವಾಗಲಿದೆ.ಇಂಧನ ಕ್ಷೇತ್ರದಲ್ಲಿರುವ ಅವಕಾಶಗಳ ಕುರಿತು ಆಯೋಜಿಸಲಾಗಿದ್ದ ಗೋಷ್ಠಿಯಲ್ಲಿ ಮಾತನಾಡಿದ ಮಾನ್ಯ ಇಂಧನ ಸಚಿವರಾದ ಶ್ರೀ ಡಿ.ಕೆ. ಶಿವಕುಮಾರ್, ತುಮಕೂರು ಜಿಲ್ಲೆಯ ಪಾವಗಡದ ಬಳಿ 12 ಸಾವಿರ ಎಕರೆ ಜಾಗದಲ್ಲಿ ಆರಂಭವಾಗಲಿರುವ ಈ ಸೋಲಾರ್ ಪಾರ್ಕ್ ಇಂಧನ ಕ್ಷೇತ್ರದಲ್ಲಿ ಜಾಗತಿಕ ಹೂಡಿಕೆಗೆ ಮುನ್ನುಡಿಯಾಗಲಿದೆ ಎಂದರು.

# ಯುಪಿಸಿಎಲ್ ಬಲವರ್ಧನೆ

ರಾಜ್ಯದಲ್ಲಿ ವಿವಿಧ ಯೋಜನೆಗಳಲ್ಲಿ 21 ಸಾವಿರ ಕೋಟಿ ಬಂಡವಾಳ ಹೂಡಲು ಅದಾನಿ ಸಮೂಹ ಮುಂದಾಗಿದೆ. ಕಳೆದ ವರ್ಷದ ಫೆಬ್ರುವರಿಯಲ್ಲಿ ಲಾಂಕೊ ಗ್ರೂಪ್‌ನಿಂದ ಉಡುಪಿ ಪವರ್ ಕಾರ್ಪೋರೇಷನ್ ಖರೀದಿಸಿದ ಅದಾನಿ ಸಮೂಹ ರಾಜ್ಯದಲ್ಲಿಗ 1200 ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡುತ್ತಿದೆ.ಈ ಶಾಖೋತ್ಪನ್ನ ಘಟಕದ ಸಾಮರ್ಥ್ಯವನ್ನು 1200 ಮೆಗಾವಾಟ್‌ನಿಂದ 2800 ಮೆಗಾವಾಟ್‌ಗಳಿಗೆ ವಿಸ್ತರಿಸಲು 11,500 ಕೋಟಿ ಬಂಡವಾಳ ಹೂಡಿಕೆ ಮಾಡಲು ಅದಾನಿ ಸಮೂಹ ಮುಂದಾಗಿದೆ. ಇಷ್ಟೇ ಅಲ್ಲದೆ ಸೌರವಿದ್ಯುತ್ ಘಟಕ ಸ್ಥಾಪನೆಗಾಗಿ ತಮ್ಮ ಸಂಸ್ಥೆ 7000 ಕೋಟಿ ಹಣ ಹೂಡಲಿದೆ ಎಂದು ಅದಾನಿ ಸಮೂಹದ ಅಧ್ಯಕ್ಷರಾದ ಶ್ರೀಗೌತಮ್ ಅದಾನಿ ಘೋಷಿಸಿದರು.



# ಮರೆಯಾಗುತ್ತಿರುವ ಆಟಗಳು–ಅಳುಗುಳಿಮನೆ ಅಥವಾ ಚೆನ್ನೇಮಣೆ

ಇದು ಮನೆಯ ಒಳಗಡೆ ಅಥವಾ ಹೊರಗಡೆಯೂ ಕುಳಿತು ಆಡಬಹುದಾದ ಆಟ. ಇಬ್ಬರು ಮಾತ್ರ ಒಮ್ಮೆಗೆ ಆಡಬಹುದು. ಈ ಆಟಕ್ಕೆ ಹುಣಿಸೆ ಬೀಜವನ್ನು ಉಪಯೋಗಿಸುತ್ತಿದ್ದರು. ಕೆಲವರು ಸ್ಥಿತಿವಂತರು ಗುಲಗಂಜಿಯನ್ನು ಉಪಯೋಗಿಸಿ ಆಡಿರುವುದೂ ಇದೆ. ಮತ್ತೆ ಕೆಲವರು ಅರಿಶಿನ ಬೇರನ್ನು ಉಪಯೋಗಿಸಿದ್ದಾರೆ. ಸಾಮಾನ್ಯವಾಗಿ, ಸುಲಭವಾಗಿ ಲಭ್ಯವಾಗುವ ಹುಣಿಸೆ ಬೀಜ ಉಪಯೋಗಿಸುವುದು ಹೆಚ್ಚು.



ಮರದಿಂದ ಮಾಡಿದ ಆಟಿಗೆಯಲ್ಲಿ ಎರಡು ಭಾಗಗಳು ಇರುತ್ತವೆ. ಪ್ರತಿಯೊಂದು ಭಾಗದಲ್ಲಿ ಏಳು ಹಳ್ಳಗಳಿರುತ್ತವೆ. ಪ್ರತಿಯೊಂದು ಹಳ್ಳದಲ್ಲಿ ಐದು ಹುಣಿಸೆ ಬೀಜಗಳನ್ನು ಹಾಕಿ, ಒಂದು ಹಳ್ಳದಿಂದ ತೆಗೆದು, ನಂತರದ ಪ್ರತಿಯೊಂದು ಹಳ್ಳದಲ್ಲಿ ಒಂದು ಬೀಜದಂತೆ ತುಂಬುತ್ತಾ ಹೋಗಬೇಕು. ಐದು ಬೀಜಗಳು ತುಂಬಿದ ನಂತರ, ನಂತರದ ಹಳ್ಳದಿಂದ ಬೀಜಗಳನ್ನು ತೆಗೆದು ತುಂಬುತ್ತಾ ಹೋಗಬೇಕು. ಹೀಗೆ ಹಾಕುತ್ತಾ ಹೋದಾಗ, ಕೊನೆಯ ಬೀಜವನ್ನು ಹಾಕಿದ ನಂತರ, ನಂತರದ ಹಳ್ಳವು ಖಾಲಿ ಇದ್ದರೆ, ಆ ಹಳ್ಳವನ್ನು ಮುಟ್ಟಿ, ನಂತರದ ಹಳ್ಳದಲ್ಲಿನ ಬೀಜ, ಹಾಗೂ ಅದರ ಎದಿರು ಬದಿಯಲ್ಲಿನ ಹಳ್ಳದಲ್ಲಿನ ಬೀಜಗಳೆಲ್ಲವೂ ಆಡಿದವರ ಪಾಲಾಗುತ್ತದೆ. ಕೊನೆಗೆ ಎಲ್ಲ ಹಳ್ಳಗಳೂ ಬರಿದಾದಾಗ ಯಾರ ಬಳಿ ಹೆಚ್ಚು ಬೀಜಗಳು ಉಳಿದಿರುತ್ತದೆಯೋ ಅವರು ಆ ಆಟವನ್ನು ಗೆದ್ದಂತೆ.



### ಹುಟ್ಟುಹಬ್ಬದ ಶುಭಾಶಯಗಳು

2016ನೇ ವರ್ಷದ ಏಪ್ರಿಲ್, ಮೇ ಹಾಗೂ ಜೂನ್ ತಿಂಗಳಿನಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಬೆಸ್ಕಾಂನ ಅಧಿಕಾರಿಗಳು/ ಸಿಬ್ಬಂದಿಗಳಿಗೆ "ಬೆಸ್ಕಾಂ ಸ್ನೇಹಿ"ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.


**-ಸಂಪಾದಕೀಯ ಮಂಡಳಿ.**

### ಹಾರ್ದಿಕ ಬೀಳ್ಕೊಡುಗೆ

ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗೆ ಶ್ರಮಿಸಿ 2016ನೇ ವರ್ಷದ ಏಪ್ರಿಲ್, ಮೇ ಹಾಗೂ ಜೂನ್ ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿರುವ ಅಧಿಕಾರಿಗಳು/ ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹಾರ್ದಿಕ ಬೀಳ್ಕೊಡುಗೆ.

**-ಸಂಪಾದಕೀಯ ಮಂಡಳಿ.**

# ಹುಲಿಯೂರುದುರ್ಗದಲ್ಲಿ ಎಚ್.ವಿ.ಡಿ.ಎಸ್ ಯೋಜನೆ



ದಿನಾಂಕ 07.01.2016 ರಂದು ಬೆಸ್ಕಾಂ ವ್ಯಾಪ್ತಿಯ ತುಮಕೂರು ಜಿಲ್ಲೆಯಲ್ಲಿ ಮಾನ್ಯ ಇಂಧನ ಸಚಿವರಾದ ಶ್ರೀ.ಡಿ.ಕೆ.ಶಿವಕುಮಾರ್‌ರವರು ಎಚ್.ವಿ.ಡಿ.ಎಸ್ ಯೋಜನೆಗೆ ಶಂಕುಸ್ಥಾಪನೆ ನೇರವೇರಿಸಿ, ನೂತನವಾಗಿ ನಿರ್ಮಾಣವಾಗುತ್ತಿರುವ ಕಛೇರಿಯ ಕಟ್ಟಡ ಮತ್ತು ವಿದ್ಯುತ್ ಸ್ಥಾವರಗಳನ್ನು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಮಾನ್ಯ ಲೋಕಸಭಾ ಸದಸ್ಯರಾದ ಶ್ರೀ.ಡಿ.ಕೆ.ಸುರೇಶ, ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ.ಪಂಕಜ್ ಕುಮಾರ್ ಪಾಂಡೆ, ತಾಂತ್ರಿಕ ನಿರ್ದೇಶಕರಾದ ಶ್ರೀ.ಹೆಚ್.ನಾಗೇಶ್ ಸೇರಿದಂತೆ ಹಲವು ಗಣ್ಯರು, ಹಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಕುಣಿಗಲ್ ತಾಲ್ಲೂಕು, ಜಿಡ್ಡಿಗೆರೆ ಮತ್ತು ನಿಡಸಾಲೆ ಗ್ರಾಮಗಳಲ್ಲಿ ನೂತನವಾಗಿ ನಿರ್ಮಿಸಲಾಗುತ್ತಿರುವ 66/11ಕೆವಿ ವಿದ್ಯುತ್ ಉಪಸ್ಥಾವರಗಳ ಉದ್ಘಾಟನೆ, ಬೆಸ್ಕಾಂನ ಹುಲಿಯೂರುದುರ್ಗ ಉಪವಿಭಾಗದ ನೂತನ ಕಛೇರಿಯ ಕಟ್ಟಡ ಮತ್ತು ಎಚ್.ವಿ.ಡಿ.ಎಸ್ ಯೋಜನೆಯ ಶಂಕು ಸ್ಥಾಪನೆಗೆ ಚಾಲನೆ ನೀಡಲಾಯಿತು. ಎಚ್.ವಿ.ಡಿ.ಎಸ್ ಯೋಜನೆ ಎಂದರೇನು?ಕುಣಿಗಲ್ ತಾಲ್ಲೂಕಿನಲ್ಲಿ ಈ ಯೋಜನೆಯ ಅನುಷ್ಠಾನ ಹೇಗೆ ಎಂಬ ಕುರಿತಾದ ಲೇಖನ ಇಲ್ಲಿದೆ.

**ಎಚ್.ವಿ.ಡಿ.ಎಸ್ ಯೋಜನೆ:** ಹೈ ವೋಲ್ಟೇಜ್ ಡಿಸ್ಟ್ರಿಬ್ಯೂಶನ್ ಸಿಸ್ಟಮ್ ತಂತ್ರಜ್ಞಾನವು ಗ್ರಾಹಕರ ವಿದ್ಯುತ್ ಸ್ಥಾವರಗಳಿಗೆ ಮುಖ್ಯವಾಗಿ ರೈತರ ಪಂಪ್‌ಸೆಟುಗಳಿಗೆ ಕಡಿಮೆ ಇರುವ ವೋಲ್ಟೇಜ್‌ನಲ್ಲಿ (3ಫೇಸ್ 380–400ವೋಲ್ಟೇಜ್) ವಿದ್ಯುತ್ ಸರಬರಾಜು ಮಾಡುವುದನ್ನು ಮಾರ್ಪಡಿಸಿ ಉತ್ತಮ ಗುಣಮಟ್ಟದ (3ಫೇಸ್ 380–440 ವೋಲ್ಟೇಜ್) ವಿದ್ಯುತ್ ಸರಬರಾಜು ಮಾಡುವ ತಂತ್ರಜ್ಞಾನವಾಗಿರುತ್ತದೆ.

**ಕುಣಿಗಲ್ ತಾಲ್ಲೂಕಿನ ನಿರಂತರ ಜ್ಯೋತಿ ಯೋಜನೆಯ ಮೂರನೇ ಹಂತದ ಕಾಮಗಾರಿಯ ಪ್ರಗತಿಯ ವಿವರ**

| ತಾಲ್ಲೂಕು | ಕುಣಿಗಲ್ |
|---|---|
| ಉದ್ದೇಶಿತ ನಿರಂತರ ಜ್ಯೋತಿ ಫೀಡರಗಳು | 10 |
| ಸಂಬಂಧಿತ ಅಗ್ರಿಫೀಡರ್‌ಗಳು | 09 |
| ಫಲಾನುಭವಿ ಗ್ರಾಮಗಳು | 155 |
| ಸಮಗ್ರ ಯೋಜನೆಯ ವೆಚ್ಚ | 27.31 ಕೋಟಿ |
| ಕಾಮಗಾರಿ ಪ್ರಾರಂಭ | 16.12.2015 |
| ಕಾಮಗಾರಿ ಪೂರ್ಣಗೊಳಿಸುವ ದಿನ | 16.03.2017 |
| ಉದ್ದೇಶಿತ ಹೆಚ್.ಟಿ ಲೈನ್ | 578.66 ಕಿ.ಮೀ |
| ಉದ್ದೇಶಿತ ಪರಿವರ್ತಕಗಳು | 216 |
| –25 ಕೆವಿಎ | 125 |
| –63 ಕೆವಿಎ | 91 |

ಹಾಲಿ ಇರುವ ವಿದ್ಯುತ್ ಸರಬರಾಜಿನ ಕ್ರಮದಲ್ಲಿ ಎಚ್.ಟಿ. ವೋಲ್ಟೇಜಿನಿಂದ 250/100/63/ಕೆವಿಎ ವಿತರಣಾ ವಿದ್ಯುತ್ ಪರಿವರ್ತಕಕ್ಕೆ ವಿದ್ಯುತ್ ಸರಬರಾಜಿಗಾಗಿ ನಂತರ ಹೆಚ್ಚು/ಅತಿ ಹೆಚ್ಚು ಉದ್ದವಾಗಿರುವ ಎಲ್.ಟಿ. ಮಾರ್ಗಗಳ ಮುಖಾಂತರ ಗ್ರಾಹಕರು ವಿವಿಧ ಸ್ಥಾವರಗಳಿಗೆ ವಿದ್ಯುತ್ ಸರಬರಾಜಾಗುತ್ತಿರುತ್ತದೆ. ಆದರೆ ಎಚ್.ವಿ.ಡಿ.ಎಸ್ ಯೋಜನೆಯಡಿ ಎಲ್.ಟಿ.ಮಾರ್ಗಗಳ ಉದ್ದವನ್ನು 100 ಮೀಟರ್‌ಗಳಿಗೆ ಸೀಮಿತಗೊಳಿಸಿ, ಗ್ರಾಗಕರ ಸ್ಥಾವರಗಳ (ಮುಖ್ಯವಾಗಿ ಕೃಷಿ ಪಂಪ್‌ಸೆಟುಗಳಿಗೆ) ಸಮೀಪದಲ್ಲಿ ಪ್ರತ್ಯೇಕವಾಗಿ ಅಥವಾ ಗುಂಪುಗೂಡಿಸಿದ ಸ್ಥಾವರಗಳಿಗೆ (2–3 ಕೃಷಿ ಪಂಪ್‌ಸೆಟುಗಳು) 25ಕೆವಿಎ ವಿದ್ಯುತ್ ಪರಿವರ್ತಕ ಅಳವಡಿಸಿ, ಅಲ್ಲಿಂದ ಎಲ್.ಟಿ ಮಾರ್ಗ ಎಳೆದು (100 ಮೀಟರ್) ವಿದ್ಯುತ್ ಸರಬರಾಜು ಮಾಡಲಾಗುವುದು.

**ಕುಣಿಗಲ್ ತಾಲ್ಲೂಕು ಹುಲಿಯೂರುದುರ್ಗ ವ್ಯಾಪ್ತಿಯಲ್ಲಿ ಪ್ರಾರಂಭಿಸಿರುವ ಎಚ್.ವಿ.ಡಿ.ಎಸ್ ಯೋಜನೆಯ ವಿವರ**

| ಯೋಜನೆಯ ವೆಚ್ಚ | 16.65 ಕೋಟಿ ರೂ.ಗಳು |
|---|---|
| ಯೋಜನೆಗೆ ಒಳಪಡುವ ಒಟ್ಟು ಫೀಡರುಗಳು | 12 |
| ಫಲಾನುಭವಿ ನೀರಾವರಿ ಪಂಪ್‌ಸೆಟ್ ಗ್ರಾಹಕರ ಸಂಖ್ಯೆ | 4,276 |
| ಅಳವಡಿಸುವ ಪರಿವರ್ತಕ ಕೇಂದ್ರಗಳ ಸಂಖ್ಯೆ | 2,049 |
| ಯೋಜನೆಗೆ ಒಳಪಡುವ ಗ್ರಾಮ ಪಂಚಾಯ್ತಿಗಳು | 09 |
| ಯೋಜನೆಗೆ ಒಳಪಡುವ ಗ್ರಾಮಗಳು | 65 |

ಎಚ್.ವಿ.ಡಿ.ಎಸ್ ತಂತ್ರಜ್ಞಾನದ ಬಳಕೆಯಿಂದ ಗ್ರಾಹಕರಿಗೆ ಉತ್ತಮವಾದ ವೋಲ್ಟೇಜ್ ದೊರಕುತ್ತದೆ. ವಿದ್ಯುತ್ ಅಡಚಣೆ ಕಡಿಮೆಯಾಗುತ್ತದೆ ಹಾಗೂ ವಿದ್ಯುತ್ ಸರಬರಾಜು ಕಂಪನಿಗೆ ವಿದ್ಯುತ್ ಸೋರಿಕೆಯಲ್ಲಿ ಆಗುವ ನಷ್ಟವನ್ನು ಕಡಿಮೆ ಮಾಡಿದಂತೆ ಅಗುತ್ತದೆ. ಇದರಿಂದ ವಿದ್ಯುತ್ ಕಳ್ಳತನವನ್ನು ತಪ್ಪಿಸಬಹುದಾಗಿದೆ

ಹುಲಿಯೂರು ದುರ್ಗ ಹೋಬಳಿಯ ವ್ಯಾಪ್ತಿಯಲ್ಲಿ ಅಂದಾಜು 950 ಸಂಖ್ಯೆಯ ಅನಧಿಕೃತ ಪಂಪ್‌ಸೆಟ್‌ಗಳಿದ್ದು, ಸದರಿ ಸೆಟ್‌ಗಳನ್ನು ರಾಜ್ಯ ಸರ್ಕಾರದ ಆದೇಶದನ್ವಯ ಅಗತ್ಯ ಹಣವನ್ನು ಹುಲಿಯೂರು ದುರ್ಗ ಉಪವಿಭಾಗ ಕಛೇರಿಯಲ್ಲಿ ಪಾವತಿಸಿ, ತಮ್ಮ ಅಕ್ರಮ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಿಕೊಂಡು ಈ ಯೋಜನೆಯ ಸದ್ಬಳಕೆಮಾಡಿಕೊಳ್ಳಬಹುದು. ಹುಲಿಯೂರು ದುರ್ಗದ ಹೋಬಳಿಯ ಕೃಷಿ ಪಂಪ್‌ಸೆಟ್ ಬಳಕೆದಾರರು ತಮ್ಮ ಕೃಷಿ ಪಂಪ್‌ಸೆಟ್‌ನ ಆರ್.ಆರ್.ಸಂಖ್ಯೆಯನ್ನು ಮತ್ತು ಇತರೆ ದಾಖಲಾತಿಗಳನ್ನು ಸಕಾಲಕ್ಕೆ ಒದಗಿಸಿ, ಎಚ್.ವಿ.ಡಿ.ಎಸ್ ಯೋಜನೆಯನ್ನು ಪೂರ್ಣಗೊಳಿಸಲು ಸಹಕಾರ ನೀಡಬೇಕಾಗಿ ವಿನಂತಿ.

**ನಿರಂತರ ಜ್ಯೋತಿ ಯೋಜನೆಯ ಪಕ್ಷಿನೋಟ:** ನಿರಂತರ ಜ್ಯೋತಿ ಯೋಜನೆಯು ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಯೋಜನೆಯಾಗಿದ್ದು, ದಿನದ 24 ಗಂಟೆಗಳ ಕಾಲ 3 ಫೇಸ್ ವಿದ್ಯುತ್‌ನ್ನು ಗ್ರಾಮಾಂತರ ಪ್ರದೇಶದಲ್ಲಿ ಮನೆ ಬಳಕೆ, ವಾಣಿಜ್ಯ, ಕುಡಿಯುವ ನೀರು, ಬೀದಿ ದೀಪ, ಗ್ರಾಮೀಣ ಕೈಗಾರಿಕೆ, ಹಾಲಿನಡೈರಿ ಮತ್ತು ಇತರೆ ಸ್ಥಾವರಗಳಿಗೆ ನೀರಾವರಿ ಪಂಪುಸೆಟ್‌ಗಳನ್ನು ಹೊರತುಪಡಿಸಿ ವಿದ್ಯುತ್ ಸರಬರಾಜು ನೀಡುವ ಯೋಜನೆಯಾಗಿದ್ದು, ಗ್ರಾಮಾಂತರ ಪ್ರದೇಶಗಳಿಗೆ ಒಂದು ವರದಾನವಾಗಿದೆ.

**ಯೋಜನೆಯ ಉದ್ದೇಶ ಮತ್ತು ಉಪಯೋಗ:** ಉದ್ದೇಶ – ಗ್ರಾಮೀಣ ಪ್ರದೇಶದಲ್ಲಿ ವ್ಯವಸಾಯೇತರ ವಿದ್ಯುತ್ ಸ್ಥಾವರಗಳಿಗೆ ದಿನದ 24 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡುವುದು.

**ಉಪಯೋಗ:**

- ಪರಿವರ್ತಕಗಳ ವಿಫಲತೆ ಕಡಿಮೆಮಾಡುವುದು
- ಮೀಟರ್ ಸಹಿತ ವಿದ್ಯುತ್ ಬಳಕೆ ಹೆಚ್ಚಿಸುವುದು
- ತಾಂತ್ರಿಕ ವಿದ್ಯುತ್ ನಷ್ಟ ಕಡಿಮೆಮಾಡುವುದು
- ವಿದ್ಯುತ್ ವಿತರಣಾ ವ್ಯವಸ್ಥೆಯ ಸುಧಾರಣೆ
- ವಿದ್ಯುತ್ ಸರಬರಾಜಿನಲ್ಲಿ ಅಡೆತಡೆಗಳನ್ನು ನಿಯಂತ್ರಿಸುವುದು

*ಮುಂದಿನ ಪುಟಕ್ಕೆ....*

# ವಿದ್ಯುತ್ ಸರಬರಾಜಿಗೆ ವಿತರಣ ಲೈಸೆನ್ಸ್‌ದಾರರ ಷರತ್ತುಗಳು

*ಮುಂದುವರಿದ ಭಾಗ...*

**4.06 ತಪಾಸಣೆ ಮತ್ತು ಪರೀಕ್ಷೆ**

(ಎ) ಅರ್ಜಿದಾರ ಮತ್ತು ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ, ಅರ್ಜಿದಾರರ ಆವರಣದಲ್ಲಿನ ವೈರಿಂಗ್ ಕಾರ್ಯವು, ಕೇಂದ್ರೀಯ ವಿದ್ಯುತ್ ಪ್ರಾಧಿಕಾರವು, ವಿದ್ಯುಚ್ಛಕ್ತಿ ಕಾಯಿದೆ, 2003ರ ಪರಿಚ್ಛೇದ 53ರ ಅಡಿಯಲ್ಲಿ ಕಾಲದಿಂದ ಕಾಲಕ್ಕೆ ನಿಗದಿಪಡಿಸುವ ನಿಯಮಗಳಿಗೆ ಅನುಸಾರವಾಗಿ ಇರತಕ್ಕದ್ದು ಹಾಗೂ ವೈರಿಂಗ್ ಕಾರ್ಯವನ್ನು ಅರ್ಹ ವಿದ್ಯುತ್ ಪರವಾನಗಿ ಪಡೆದ ಗುತ್ತಿಗೆದಾರರಿಂದ ಮಾಡಿಸಿರತಕ್ಕದ್ದು. ಅರ್ಜಿದಾರರು, ಆ ವಿದ್ಯುತ್ ಗುತ್ತಿಗೆದಾರರು ನೀಡಿದ ಕಾರ್ಯಸಮಾಪನಾ ವರದಿ ಮತ್ತು ಸ್ಥಾಪನದ ಪರೀಕ್ಷಾ ವರದಿಯನ್ನು ಲೈಸೆನ್ಸುದಾರರಿಗೆ ಸಲ್ಲಿಸತಕ್ಕದ್ದು.

ಸ್ಥಾಪನದ ಸಾಮರ್ಥ್ಯ ಹಾಗೂ ಸ್ವರೂಪವನ್ನು ಬದಲಾಯಿಸದ ಲ್ಯಾಂಪು, ಫ್ಯಾನು, ಫ್ಯೂಸು, ಕಡಿಮೆ ವೋಲ್ಟೇಜಿನ ಗೃಹೋಪಕರಣಗಳು ಮತ್ತು ಜೋಡಣೆಗಳು, ಇಂತಹುಗಳ ದುರಸ್ತಿಯನ್ನು ಹೊರತುಪಡಿಸಿ, ಸ್ಥಾಪನಕ್ಕೆ ಸೇರ್ಪಡೆ, ಬದಲಾವಣೆ, ದುರಸ್ತಿ ಮತ್ತು ಹೊಂದಾಣಿಕೆ, ಇಂತಹ ಯಾವುದೇ ವಿದ್ಯುತ್ ಕೆಲಸಗಳನ್ನು ಯಾವುದೇ ಗ್ರಾಹಕನ ಪರವಾಗಿ ಅಥವಾ ಆವರಣದ ಮಾಲಿಕನ ಪರವಾಗಿ, ಸರ್ಕಾರದಿಂದ ವಿದ್ಯುತ್ ಪರವಾನಗಿ ಪಡೆದ ಅರ್ಹ ವಿದ್ಯುತ್ ಗುತ್ತಿಗೆದಾರರಿಂದ ಮಾತ್ರ ಹಾಗೂ ಸರ್ಕಾರದಿಂದ ಮಾನ್ಯತೆ ಪಡೆದ ಅಥವಾ ಅರ್ಹತೆಯ ಪ್ರಮಾಣ ಪತ್ರವನ್ನು ಪಡೆದ ವ್ಯಕ್ತಿಯ ನೇರ ಮೇಲ್ವಿಚಾರಣೆಯಲ್ಲಿ ನಡೆಸತಕ್ಕದ್ದೇ ಹೊರತು ಇನ್ನಾವುದೇ ವ್ಯಕ್ತಿಯಿಂದ ಈ ಕಾರ್ಯಗಳನ್ನು ನಡೆಸತಕ್ಕದ್ದಲ್ಲ. ಈ ನಿಯಮವನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯು ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರವು ರೂಪಿಸಿರುವ ನಿಯಮಗಳ ಅಡಿಯಲ್ಲಿ ದಂಡ ಸಹಿತ ಶಿಕ್ಷೆಗೆ ಗುರಿಯಾಗುತ್ತಾನೆ.

(ಬಿ) i) ವಾಸ್ತವಿಕ ವೈರಿಂಗ್ ನಕ್ಷೆ ಹಾಗೂ ವಿದ್ಯುತ್ ಗುತ್ತಿಗೆದಾರರ ಕಾರ್ಯಸಮಾಪನಾ ವರದಿಯನ್ನು ಸ್ವೀಕರಿಸಿದ ಮತ್ತು ವಿದ್ಯುತ್ ಸಂಪರ್ಕ ಸೇವಾ ಮಾರ್ಗದ ಕೆಲಸವು ಪೂರ್ಣಗೊಂಡಿದೆ ಎಂದು ಅರ್ಜಿದಾರರಿಂದ ಮಾಹಿತಿ ಪಡೆದ ನಂತರ, ಲೈಸೆನ್ಸುದಾರರ ಇಂಜಿನಿಯರ್ ಅವರು ಸ್ಥಾಪನದ ತಪಾಸಣೆ ಮತ್ತು ಪರೀಕ್ಷೆಯನ್ನು ಯಾವ ದಿನಾಂಕದಂದು ಯಾವ ಸಮಯಕ್ಕೆ ನಡೆಸುವರು ಎಂಬುದರ ಬಗ್ಗೆ ಲೈಸೆನ್ಸುದಾರರು ಆ ಅರ್ಜಿದಾರರಿಗೆ ತಿಳಿಸತಕ್ಕದ್ದು. ಆ ರೀತಿ ತಪಾಸಣೆ ಮತ್ತು ಪರೀಕ್ಷೆ ನಡೆಸುವ ಸಮಯದಲ್ಲಿ ಲೈಸೆನ್ಸುದಾರರ ಇಂಜಿನಿಯರ್ ಅವರಿಗೆ ಅವಶ್ಯ ಮಾಹಿತಿ ನೀಡಲು ಅರ್ಜಿದಾರರ ವಿದ್ಯುತ್ ಗುತ್ತಿಗೆದಾರರಿಂದ ನೇಮಿಸಲ್ಪಟ್ಟ ಮೇಲ್ವಿಚಾರಕರು ಹಾಜರಿರುವಂತೆ ಖಚಿತಪಡಿಸಿಕೊಳ್ಳುವುದು ಅರ್ಜಿದಾರರ ಕರ್ತವ್ಯವಾಗಿರುತ್ತದೆ. ಅರ್ಜಿದಾರರು ಈ ಕ್ರಮವನ್ನು ಅನುಸರಿಸಿದ ನಂತರ, ಇಂಜಿನಿಯರ್‌ರವರು ಸ್ಥಾಪನದ ತಪಾಸಣೆ ಮತ್ತು ಪರೀಕ್ಷಾ ಕಾರ್ಯವನ್ನು ಪೂರ್ಣಗೊಳಿಸತಕ್ಕದ್ದು.

- ಲೈಸೆನ್ಸುದಾರರು ಸ್ಥಾಪನದ ತಪಾಸಣೆ ಮತ್ತು ಪರೀಕ್ಷೆಯನ್ನು ಪೂರ್ಣಗೊಳಿಸಿ, ತೃಪ್ತರಾಗದ ಹೊರತು, ಅರ್ಜಿದಾರರ ಸ್ಥಾಪನಕ್ಕೆ ಯಾವುದೇ ರೀತಿಯ ವಿದ್ಯುತ್ ಸಂಪರ್ಕವನ್ನು ನೀಡಬಾರದು. ಇಂಜಿನಿಯರ್‌ರವರು ನಡೆಸುವ ಮೊದಲ ತಪಾಸಣೆ ಮತ್ತು ಪರೀಕ್ಷೆಗೆ ಯಾವುದೇ ರೀತಿಯ ಶುಲ್ಕವನ್ನು ವಿಧಿಸತಕ್ಕದ್ದಲ್ಲ. ಆದರೆ, ಮೊದಲ ತಪಾಸಣೆಯನ್ನು ನಡೆಸುವುದಕ್ಕಾಗಿ ನಿಗದಿಪದಿಸಿದ ದಿನಾಂಕದಂದು, ನಿಗದಿತ ಸಮಯಕ್ಕೆ ಮೇಲೆ ತಿಳಿಸಿರುವಂತೆ ಅರ್ಜಿದಾರ ಅಥವಾ ಆತನ ಪ್ರತಿನಿಧಿ ಅಥವಾ ಆತನ ವಿದ್ಯುತ್ ಗುತ್ತಿಗೆದಾರರು ಹಾಜರಾಗದಿದ್ದ ಕಾರಣ ಅಥವಾ ಸ್ಥಾಪನದ ಮೊದಲ ತಪಾಸಣೆ/ಪರೀಕ್ಷೆಯ ಸಂದರ್ಭದಲ್ಲಿ ಕಂಡುಬಂದ ಲೋಪದೋಷಗಳ ಪ್ರಯುಕ್ತ ಅಥವಾ ಸ್ಥಾಪನದ ಕೆಲಸ ಪೂರ್ಣವಾಗಿಲ್ಲದ ಕಾರಣದಿಂದ ಮೊದಲ ತಪಾಸಣೆ ಅಥವಾ ಪರೀಕ್ಷೆಯನ್ನು ನಡೆಸಲು ಸೂಕ್ತ ಸೌಲಭ್ಯವನ್ನು ಒದಗಿಸದ ಕಾರಣ ಪುನಃ ತಪಾಸಣೆ/ಪರೀಕ್ಷೆ ನಡೆಸಬೇಕಾಗಿ ಬಂದರೆ, ಅಂತಹ ಪ್ರತಿಯೊಂದು ತಪಾಸಣೆ/ ಪರೀಕ್ಷೆಗೆ ಕಲಮು 30.12ರಲ್ಲಿ ನಿಗದಿಪಡಿಸಿರುವ ಶುಲ್ಕವನ್ನು ಅರ್ಜಿದಾರರು ಪಾವತಿಸಬೇಕಾಗುತ್ತದೆ.

**ಟಿಪ್ಪಣಿ:** ಆ ವಿದ್ಯುತ್ ಗುತ್ತಿಗೆದಾರರ ಮೇಲ್ವಿಚಾರಕರು ತಪಾಸಣೆಯ ಸಮಯದಲ್ಲಿ ಹಾಜರಿರದಿದ್ದರೆ, ಲೈಸೆನ್ಸುದಾರರು ಸ್ಥಾಪನದ ತಪಾಸಣೆ ಮತ್ತು ವಿದ್ಯುತ್ ಸಂಪರ್ಕ ನೀಡುವ ಮತ್ತೊಂದು ದಿನಾಂಕವನ್ನು ಅರ್ಜಿದಾರರಿಗೆ ತಿಳಿಸತಕ್ಕದ್ದು. ಒಂದು ವೇಳೆ ಆ ಮೇಲ್ವಿಚಾರಕರು ಎರಡನೆಯ ತಪಾಸಣೆಯ ಸಂದರ್ಭದಲ್ಲಿ ಹಾಜರಿರದಿದ್ದರೂ, ಪರೀಕ್ಷೆಯನ್ನು ನಡೆಸಿ, ಅದರ ಫಲಿತಾಂಶವು ತೃಪ್ತಿಕರವಾಗಿದ್ದರೆ, ಸ್ಥಾಪನಕ್ಕೆ ವಿದ್ಯುತ್ ಸರಬರಾಜು ಸೇವೆಯನ್ನು ನೀಡತಕ್ಕದ್ದು. ಈ ರೀತಿ ನಡೆಸಿದ ಎರಡನೆಯ ಅಥವಾ ತದನಂತರದ ತಪಾಸಣೆಗೆ ಕಲಮು 30.12ರ ಪ್ರಕಾರ ಗ್ರಾಹಕರು ಶುಲ್ಕವನ್ನು ಪಾವತಿಸತಕ್ಕದ್ದು.

*.........ಮುಂದುವರಿಯುವುದು.*

*(ಹಿಂದಿನ ಪುಟದಿಂದ...)*

# ಎಚ್.ವಿ.ಡಿ.ಎಸ್ ಯೋಜನೆ...

**ಕುಣಿಗಲ್ ತಾಲ್ಲೂಕಿನಲ್ಲಿ ಸಕ್ರಮೀಕರಣಗೊಂಡಿರುವ ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳ ವಿವರ ಹೀಗಿದೆ**

| ಸರ್ಕಾರಿ ಆದೇಶದ ವರ್ಷ | ಭದ್ರತಾ ಠೇವಣ ಪಾವತಿಸಿರುವವರ ಸಂಖ್ಯೆ | ಮೂಲಭೂತ ಸೌಕರ್ಯ ಕಲ್ಪಿಸಿರುವ ಸಂಖ್ಯೆ | ಟೆಂಡರ್ ಕರೆದು ಕಾಮಗಾರಿ ಪ್ರಗತಿಯಲ್ಲಿರುವ ಸಂಖ್ಯೆ |
|---|---|---|---|
| 2011–12 | 772 | 692 | 80 |
| 14.07.2014 | 592 | 59 | 537 |
| ಒಟ್ಟು | 1268 | 747 | 617 |

**ಅನಧಿಕೃತ ನೀರಾವರಿ ಪಂಪುಸೆಟ್‌ಗಳ ಸಕ್ರಮ ಯೋಜನೆ:** ಅನಧಿಕೃತ ನೀರಾವರಿ ಪಂಪುಸೆಟ್‌ಗಳನ್ನು ಸಕ್ರಮಗೊಳಿಸುವ ಯೋಜನೆಯಡಿ ರೈತರು ಉಪಯೋಗಿಸುತ್ತಿರುವ ತಮ್ಮ ಅಕ್ರಮ ನೀರಾವರಿ ಪಂಪುಸೆಟ್‌ಗಳನ್ನು ಸಕ್ರಮಗೊಳಿಸಿಕೊಳ್ಳಲು ಸರ್ಕಾರದ ಆದೇಶದಂತೆ ರೂ.10,000 ಸಕ್ರಮ ಶುಲ್ಕ ಭದ್ರತಾ ಠೇವಣಿ ಪ್ರತಿ ಅಶ್ವಶಕ್ತಿಗೆ ರೂ.710, ಮಾಪಕ ಭದ್ರತಾ ಠೇವಣಿ ರೂ.1200 ಮತ್ತು ಮೇಲ್ವಿಚಾರಣಾ ಶುಲ್ಕ ರೂ.150 ಗಳನ್ನು ಪಾವತಿಸಿ ಸಕ್ರಮಗೊಳಿಸಿಕೊಳ್ಳಬಹುದು.

**ಶ್ರೀ ಕೆ.ವಿ. ಗೋವಿಂದಪ್ಪ,**
ಅಧೀಕ್ಷಕ ಇಂಜಿನಿಯರ್, ತುಮಕೂರು

**ವಿದ್ಯುತ್ ಕ್ಷೇತ್ರದ ಜಾಗತಿಕ ವೇದಿಕೆಯೆಂದೇ ಕರೆಯಲಾಗುವ 'ಎಲಿಕ್ರಮಾ-2016' ಸಮಾವೇಶನ್ನು ಫೆಬ್ರುವರಿಯಲ್ಲಿ ಬೆಂಗಳೂರಿನಲ್ಲಿ ಆಯೋಜಿಸಲಾಗಿತ್ತು. ಈ ಸಮಾವೇಶದ ಕೆಲ ಆಯ್ದ ಚಿತ್ರಗಳು.**











**ಎಲಿಕ್ರಮಾ–2016 ಸಮಾವೇಶದ ಉದ್ಘಾಟನಾ ಸಮಾರಂಭದಲ್ಲಿ ಕೇಂದ್ರ ಇಂಧನ ಸಚಿವರಾದ ಶ್ರೀ ಪಿಯೂಶ್ ಗೋಯೆಲ್, ರಾಜ್ಯ ಇಂಧನ ಸಚಿವರಾದ ಶ್ರೀ ಡಿ.ಕೆ. ಶಿವಕುಮಾರ್, ಕೈಗಾರಿಕಾ ಸಚಿವರಾದ ಶ್ರೀ ಆರ್.ವಿ. ದೇಶಪಾಂಡೆ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.**

# ವರ್ಚುಯಲ್ ಗ್ರಂಥಾಲಯ

*4ನೇ ಪುಟದಿಂದ...*

ನೀವು ಕೂಡ ಯಾವುದಾದರು ಮಹತ್ವದ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ಈ ತರಬೇತಿಯ ಲಾಭವನ್ನು ಇನ್ನಿತರ ಸಹೋದ್ಯೋಗಿಗಳು ಪಡೆಯಬಹುದು ಎಂಬ ಅಭಿಪ್ರಾಯ ಹೊಂದಿದ್ದರೆ, ತರಬೇತಿಯ ವಸ್ತುಗಳನ್ನು ಪ್ರಧಾನ ವ್ಯವಸ್ಥಾಪಕರು (ಆಡಳಿತ ಮತ್ತು ಮಾನವ ಸಂಪನ್ಮೂಲ)ರವರ ಮೂಲಕ ಗ್ರಂಥಾಲಯಕ್ಕೆ ಅಪ್‌ಲೋಡ್ ಮಾಡಿಸಬಹುದು. ಈ ವರ್ಚುಯಲ್ ಲೈಬ್ರರಿಯ ಇನ್ನೊಂದು ವಿಶೇಷತೆಯೆಂದರೆ ವಿದ್ಯುತ್ ಕ್ಷೇತ್ರದ ಹಲವು ವಿಚಾರಗಳ ಚರ್ಚೆಗಾಗಿ ಇಲ್ಲಿ ವೇದಿಕೆಯನ್ನು ಕಲ್ಪಿಸಲಾಗಿದೆ. ಹೀಗಾಗಿ ನಿಮಗೆ ಗೊತ್ತಿರುವ ಅಥವಾ ನೀವು ತಿಳಿಯಲೆತ್ನಿಸುವ ವಿಷಯಗಳ ರಚನಾತ್ಮಕ ಚರ್ಚೆಗೆ ಇಲ್ಲಿ ಅವಕಾಶವಿದೆ.

ಈ ವರ್ಚುಯಲ್ ಲೈಬ್ರರಿಯನ್ನು ದಿನಾಂಕ 02.03.2016 ರಂದು ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಪಿ. ರವಿಕುಮಾರ್‌ರವರುವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕ.ವಿ.ಪ್ರ.ನಿ.ನಿ.ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಜಾವೇದ್ ಅಖ್ತರ್ ಹಾಗೂ ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಪಂಕಜ್ ಕುಮಾರ್ ಪಾಂಡೆ ಇವರು ಉಪಸ್ಥಿತರಿದ್ದರು

ಬೆಸ್ಕಾಂನ ಮಾಹಿತಿ ತಂತ್ರಜ್ಞಾನ ವಿಭಾಗದ ಸಹಾಯಕ ಅಭಿಯಂತರರಾದ ಶ್ರೀ ಶೇಖ್ ಫರೀದ್ ಜಾಗೀರ್‌ದಾರ್ ಹಾಗೂ ಶ್ರೀ ರಾಮಸ್ಕಂದ ಇವರು ಈ ಗ್ರಂಥಾಲಯದ ತಂತ್ರಾಂಶವನ್ನು ವಿನ್ಯಾಸಗೊಳಿಸಿ, ಅಭಿವೃದ್ಧಿಗೊಳಿಸಿರುವುದು ಹೆಮ್ಮೆಯ ವಿಷಯ.

# ರಾಷ್ಟ್ರಕವಿ ಗೋವಿಂದ ಪೈ



ಮಂಜೇಶ್ವರ ಗೋವಿಂದ ಪೈ ಹೊಸಗನ್ನಡ ಸಾಹಿತ್ಯದ ಒಂದು ದೊಡ್ಡ ಹೆಸರು.ಕನ್ನಡ ಕಾವ್ಯ ಜಗತ್ತಿನ ಮೊದಲ 'ರಾಷ್ಟ್ರಕವಿ' ಬಿರುದನ್ನು ಪಡೆದವರು. ಮಂಗಳೂರಿನ ಬಾಬ ಪೈ ಮನೆತನದಲ್ಲಿ 23-3-1883 ರಲ್ಲಿ ಜನಿಸಿದ ಗೋವಿಂದ ಪೈ, ಶ್ರೀಮಂತ ಕುಟುಂಬಕ್ಕೆ ಸೇರಿದವರು.ಪ್ರಾಥಮಿಕ ಹಂತದ ಶಿಕ್ಷಣವನ್ನು ಮಂಗಳೂರಿನಲ್ಲಿ ಮುಗಿಸಿದ ಅವರು ಮದರಾಸು ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ.ಎ ಪದವಿ ಓದಿದರು.

ಸಾಹಿತ್ಯದ ಅಧ್ಯಯನವನ್ನು ಸತತವಾಗಿ ನಡೆಸಿದ ಅವರು ಬಹುಭಾಷಾ ಪಾರಂಗತರೂ ಆಗಿದ್ದರು.

ಗೊಲ್ಗೊಥಾ (ಕಥನ ಕಾವ್ಯ), ವೈಶಾಖಿ (ಖಂಡ ಕಾವ್ಯ), ಗಿಳಿವಿಂಡು, ಗೊಮ್ಮಟ ಜಿನಸ್ತುತಿ (ಕವನ), ಹೆಬ್ಬೆರಳು, ಚಿತ್ರಭಾನು (ನಾಟಕಗಳು), ಪಾರ್ಶ್ವನಾಥ ತೀರ್ಥಂಕರ ಚರಿತ, ಭಕ್ತವಾಣಿ, ಭಗವಾನ್ ಬುದ್ಧ, ಇವೇ ಮುಂತಾದವು ಅವರ ಪ್ರಮುಖ ಕೃತಿಗಳು.

1949 ರಲ್ಲಿ ಆಗಿನ ಮದರಾಸು ರಾಜ್ಯ ಅವರ ಸಾಹಿತ್ಯ ಕೃಷಿಗೆ 'ರಾಷ್ಟ್ರಕವಿ' ಬಿರುದನ್ನು ನೀಡಿತು.ಪೈ ಕನ್ನಡದ ಮೊಟ್ಟಮೊದಲ ರಾಷ್ಟ್ರಕವಿ ಆದರು.ನಂತರ 1950 ರಲ್ಲಿ ಮುಂಬೈನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯನ್ನು ಅಲಂಕರಿಸಿದರು. ಏಸುಕ್ರಿಸ್ತನ ಕೊನೆಗಾಲವನ್ನು ಹೃದಯಂಗಮವಾಗಿ ವರ್ಣಿಸುವ 'ಗೊಲ್ಗೊಥಾ' ಮತ್ತು ಬುದ್ಧನ ಕೊನೆಗಾಲವನ್ನು ನಿರೂಪಿಸುವ 'ವೈಶಾಖಿ' ಅವರ ಜನಪ್ರಿಯ ಕಾವ್ಯಗಳು.ಆಗಿನ ಸಂಪ್ರದಾಯದಂತೆ ಚಿಕ್ಕ ವಯಸ್ಸಿನಲ್ಲಿಯೇ ಮದುವೆಯಾದ ಪೈಗಳ ಪತ್ನಿ ಕೃಷ್ಣಾಬಾಯಿ ಹೆಚ್ಚುಕಾಲ ಬಾಳಲಿಲ್ಲ. ಅವರಿಗೆ ಮಕ್ಕಳು ಆಗಲಿಲ್ಲ. ನಂತರ ಬದುಕಿನ ಕೊನೆದಿನದವರೆಗೂ ಅವರು ಏಕಾಂಗಿಯಾಗಿಯೇ ಉಳಿದರು.ತಮ್ಮನ ಮಕ್ಕಳನ್ನೇ ಪ್ರೀತಿಯಿಂದ ಸಲಹಿದರು. 1963ರ ಸೆಪ್ಟೆಂಬರ್ 6 ರಂದು ಅವರು ಕೊನೆಯುಸಿರೆಳೆದರು.

**ಕನ್ನಡದಲ್ಲಿ 'ರಾಷ್ಟ್ರಕವಿ' ಬಿರುದಿಗೆ ಪಾತ್ರರಾದವರು ಮೂವರು ಮಾತ್ರ. ಎಂ.ಗೋವಿಂದ ಪೈ, ಕುವೆಂಪು ಹಾಗೂ ಡಾ. ಜಿ.ಎಸ್.ಶಿವರುದ್ರಪ್ಪ. ಅವರನ್ನು ಪರಿಚಯಿಸುವ ಮಾಲಿಕೆಯಲ್ಲಿ ಮೊದಲನೆಯದಾಗಿ ಗೋವಿಂದ ಪೈಗಳ ಕುರಿತು ಈ ಸಂಚಿಕೆಯಲ್ಲಿ ಕೊಡಲಾಗಿದೆ**

# ಆರೋಗ್ಯಕ್ಕಾಗಿ ಅನಾನಸ್

ಸುವಾಸನಾಭರಿತವಾಗಿರುವ ಅನಾನಸ್ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿಯೂ ಮಹತ್ವದ ಪಾತ್ರ ವಹಿಸಿದೆ. ಇದು ಪೋಷಕಾಂಶಗಳ ಆಗರ. ಮೂಲತಃ ಬ್ರೆಜಿಲ್ ದೇಶಕ್ಕೆ ಸೇರಿದ್ದು. ಇದರಿಂದ ಗೊಜ್ಜು, ಕೇಸರಿಭಾತ್, ಜ್ಯೂಸ್, ಮೊರಬ್ಬ, ಫ್ರುಟ್ ಸಲಾಡ್... ಇತ್ಯಾದಿ ರುಚಿಕರವಾದ ಅಡುಗೆ ಮಾಡಬಹುದು. ಇಷ್ಟೆಲ್ಲ ಗುಣಹೊಂದಿರುವ ಅನಾನಸ್ ಹಣ್ಣು ಆರೋಗ್ಯಕ್ಕೆ ಹೇಗೆ ಸಹಾಯಕಾರಿ ಎಂದು ಇಲ್ಲಿ ತಿಳಿಸಲಾಗಿದೆ. ಹಾಗೆಯೇ ಕೆಳಗಡೆ ಕೆಲವೊಂದು ಎಚ್ಚರಿಕೆಗಳೂ ಇವೆ, ಅವುಗಳನ್ನೂ ಗಮನಿಸಿ;

ದಿನವೂ ಊಟದ ನಂತರ ಅನಾನಸ್ ಹಣ್ಣಿನ ಹೋಳುಗಳಿಗೆ ಸ್ವಲ್ಪ ಉಪ್ಪು ಮತ್ತು ಸ್ವಲ್ಪ ಕರಿಮೆಣಸಿನ ಪುಡಿಯನ್ನು ಹಚ್ಚಿ ಸೇವಿಸುವುದರಿಂದ ಅಜೀರ್ಣ ದೂರವಾಗುತ್ತದೆ.



ಅನಾನಸ್ ಹಣ್ಣಿನ ಹೋಳುಗಳಿಗೆ ಸ್ವಲ್ಪ ಕಾಳುಮೆಣಸಿನ ಪುಡಿಯನ್ನು ಹಚ್ಚಿ ಸೇವಿಸುವುದರಿಂದ ಆಮ್ಲಪಿತ್ತ ದೂರವಾಗುತ್ತದೆ. ಈ ಹಣ್ಣನ್ನು ನಿಯಮಿತ ಸೇವನೆಯಿಂದ ಗಂಟಲುಬೇನೆ ಗುಣವಾಗುತ್ತದೆ.

ಪ್ರತಿದಿನ ತಾಜಾ ಅನಾನಸ್ ಹಣ್ಣನ್ನು ಸೇವಿಸುವುದರಿಂದ ಹೃದಯದ ದುರ್ಬಲತೆ ದೂರವಾಗುತ್ತದೆ.

ಮೂತ್ರ ಕಟ್ಟುವುದು, ಪಿತ್ತಕೋಶ ಊದಿಕೊಳ್ಳುವುದು, ಕಣ್ಣಿನ ಸುತ್ತಮುತ್ತ ಊದಿಕೊಳ್ಳುವುದು ಮುಂತಾದ ತೊಂದರೆಗಳಿಗೆ ತಾಜಾ ಅನಾನಸ್ ಹಣ್ಣನ್ನು ತಿಂದು ಹಾಲು ಕುಡಿಯಬೇಕು. ಬೇರೆ ಏನನ್ನೂ ಸೇವಿಸಬಾರದು. ಹೀಗೆ ಮಾಡುವುದರಿಂದ ಒಂದು ವಾರದಲ್ಲಿ ಗುಣವಾಗುವುದು.

ಅನಾನಸು ಹಣ್ಣನ್ನು ಚಿಕ್ಕ ಮಕ್ಕಳು ಆಗ್ಗಾಗ್ಗೆ ತಿನ್ನುತ್ತಿದ್ದರೆ ಗಂಟಲಿನ ತೊಂದರೆ ಕಾಡುವುದಿಲ್ಲ.

ಅನಾನಸ್ ಹಣ್ಣನ್ನು ನಿಯಮಿತವಾಗಿ ಸೇವಿಸುವುದರಿಂದ ಧೂಮಪಾನದಿಂದ ಉಂಟಾಗುವ ಅನೇಕ ದುಷ್ಪರಿಣಾಮಗಳು ದೂರವಾಗುತ್ತವೆ.

ಇದರ ರಸವನ್ನು ಕಜ್ಜಿ, ತುರಿಕೆ ಇದ್ದಲ್ಲಿ ಹಚ್ಚಿದರೆ ವಾಸಿಯಾಗುತ್ತವೆ.

ಈ ಹಣ್ಣಿಗೆ ಕರಿಮೆಣಸಿನ ಪುಡಿಯನ್ನು ಹಾಕಿ ಸೇವಿಸಿದರೆ ಕೆಮ್ಮು, ಕಫಾ ಕಡಿಮೆ ಆಗುತ್ತದೆ.

ಅನಾನಸ್ ಹಣ್ಣಿನ ಹೋಳುಗಳನ್ನು ಜೇನುತುಪ್ಪದೊಡನೆ ಸೇವಿಸುವುದರಿಂದ ಯಕೃತ್ತಿನ ದೋಷ ಮತ್ತು ಅರಿಶಿಣ ಕಾಮಾಲೆ ಗುಣವಾಗುತ್ತದೆ.

**ಎಚ್ಚರವಹಿಸಬೇಕಾದ ಸಂಗತಿಗಳು:**

- ಅನಾನಸ್‌ನ್ನು ಕಾಲಿಹೊಟ್ಟೆಯಲ್ಲಿ ತಿನ್ನಬಾರದು.
- ಗರ್ಭಿಣಿ ಸ್ತ್ರೀಯರು ಅನಾನಸನ್ನು ಎಂದಿಗೂ ತಿನ್ನಬಾರದು. ಇದು ಗರ್ಭವನ್ನು ಬೆಳೆಯಲು ಬಿಡುವುದಿಲ್ಲ ಅದನ್ನು ಸಂಕುಚಿತಗೊಳಿಸುತ್ತದೆ. ಅದರಿಂದಾಗಿ ಗರ್ಭಸ್ರಾವ ಆಗುವ ಸಂಭವಗಳುಂಟು
- ಅನಾನಸ್ ಕೆಲವರಲ್ಲಿ ಅಲರ್ಜಿಯುಂಟು ಮಾಡುತ್ತದೆ. ತುಟಿ ಬಾವು ಮತ್ತು ಗಂಟಲು ಕೆರೆತಗಳಂತಹ ಲಕ್ಷಣಗಳು ಕಂಡುಬರುತ್ತವೆ. ಇದರಿಂದ ತಪ್ಪಿಸಿಕೊಳ್ಳಬೇಕೆಂದರೆ, ಶುದ್ಧ ಉಪ್ಪು ನೀರಿನಲ್ಲಿ ಅನಾನಸ್ ಹೋಳುಗಳನ್ನು ಸ್ವಚ್ಛಗೊಳಿಸಿ ನಂತರ ಬಳಸಬೇಕು. ಹೀಗೆ ಮಾಡುವುದರಿಂದ ಹಣ್ಣಿನಲ್ಲಿರುವ ಒರಟು ಪರಿಣಾಮ ಬೀರುವಂತಹ ಕಿಣ್ವಗಳು ನಾಶವಾಗುತ್ತವೆ.
- ಅನಾನಸ್ ಹಣ್ಣು ಜೀರ್ಣಾಂಗವ್ಯೂಹ ತಲುಪಿದ ನಂತರ ಮದ್ಯವಾಗಿ ಬದಲಾಗುತ್ತದೆ!. ಪ್ರತಿಯಾಗಿ ಸಂಧಿವಾತ ಹಾಗು ಕೀಲು ನೋವುಗಳನ್ನು ಪ್ರಚೋದಿಸಬಹುದು. ಆದ್ದರಿಂದ, ಸಂಧಿವಾತ ಮತ್ತು ಕೀಲು ನೋವು ಇರುವ ಜನರು ಅನಾನಸ್ನ್ನು ಹೆಚ್ಚಾಗಿ ತಿನ್ನದಿರುವುದು ಒಳ್ಳೆಯದು.
- ಮಧುಮೇಹಿಗಳಿಗೆ ಅನಾನಸ್ ಹಿತಕರವಲ್ಲ. ಇದು ರಕ್ತದ ಇನ್ಸುಲಿನ್ ಮಟ್ಟವನ್ನು ವೃದ್ಧಿಸಬಹುದಾಗಿದೆ. ಆದರೂ ನೀವು ಎಷ್ಟು ಗಾತ್ರದ ಹಣ್ಣು ತಿನ್ನುತ್ತೀರಿ ಹಾಗು ಎಷ್ಟು ಅವಧಿಗೊಮ್ಮೆ ತಿನ್ನುತ್ತೀರಿ ಎಂಬುದರ ಮೇಲೆ ಇದು ಅವಲಂಬಿತವಾಗಿರುತ್ತದೆ. ಆದ್ದರಿಂದ ರಕ್ತದ ಸಕ್ಕರೆ ಏರಿಕೆ ತಪ್ಪಿಸಲು ದಿನಕ್ಕೆ 2 ತುಂಡುಗಳನ್ನು ಮಾತ್ರ ತಿನ್ನುವುದು ಒಳಿತು. ರಕ್ತವನ್ನು ತಿಳಿಯಾಗಿಸುವ ಔಷಧಗಳನ್ನು ಸೇವಿಸುವ ಜನರು ಈ ಹಣ್ಣನ್ನು ತಿನ್ನಬಾರದು. ಅಲ್ಲದೆ ಈ ಹಣ್ಣು ರಕ್ತ ಹೆಪ್ಪುಗಟ್ಟುವಿಕೆ ಪ್ರಕ್ರಿಯೆಗೂ ಅಡ್ಡಿಯನ್ನುಂಟುಮಾಡುತ್ತದೆ.

## ಹೊಸಬೆಳಕು ಎಲ್‌ಇಡಿ ಅಭಿಯಾನದ
## ರಾಯಭಾರಿಗಳಾದ ನಟ ಪುನೀತ್ ರಾಜ್‌ಕುಮಾರ್ ಹಾಗೂ ನಟಿ ರಮ್ಯಾ













### ಹೊಸ ಚಿಗುರು

ಹೊಸತನವು ಬರುತಿಹುದು
ನೂತನವಾಗುವುದು ಎಲ್ಲಾ ಬರುವು
ಹಳೆ ಕೊಳೆಯ ಜಡತೆಯ ಜಿಡ್ಡು ಹರಿದು
ನವ ಚೇತನದ ಹೊಸ ಹುರುಪು
ತಂದಿಹುದು

ಹಳೆ ಬೇರಿನ ರಸ ಹೀರಿ
ಚಿಗುರುತಿರಲು ಹೊಸ ಚಿಗುರು
ಮೆಲ್ಲನೆ ಹರಡುತಿರಲು ಹಸಿರು

ತುಂಬಿ ಹರಿವುದು ಶಾಶ್ವತ ನೆರಳು

ತಾಯಿಯ ಮಮತೆಯಲ್ಲಿ ಮೇಲುಕೀಳಿಲ್ಲ
ಪ್ರಕೃತಿಯ ಸಹಜತೆಯಲ್ಲಿ ಒಂದೇ
ಮನುಜರು ನಾವು
ಸುಖ ಸಂಪತಲ್ಲಿ ಹಿಗ್ಗುವುದಿಲ್ಲ
ಬರಿದೇ ದುಃಖದಲ್ಲಿ ಕುಗ್ಗುವುದಿಲ್ಲ


ಎನಗೆ ನೀ ಯಾರೋ
ನಿನಗೆ ನಾ ಯಾರೋ

ಜೊತೆ ದುಡಿವ ಈ ಬಾಳ್ವೆಯಲ್ಲಿ
ನಾವೆಲ್ಲರೂ ಬಂಧುಗಳು

ಜೊತೆಗಿದ್ದು ದುಡಿಮೆ ಕಂಡು
ದುಡಿಮೆಯೇ ದೇವರಿಂದು ಬದುಕಿರುವ
ಹಸನಾದ ಸಮಾಜ ಕಟ್ಟಲು
ಪೀಳಿಗೆಗೆ ನೆರಳಾಗುವುದು ಕಾಲದಲ್ಲಿ.

– **ಕವಿತಾ.ಕೆ** ಮ್ಯಾನೇಜರ್
(ಎಮ್‌ಐಎಸ್&ಐಟಿಸಿ)





## ಸಂಪಾದಕ ಮಂಡಳಿ

| | |
|---|---|
| **ಶ್ರೀ ಪಂಕಜ್‌ಕುಮಾರ್ ಪಾಂಡೆ,** ವ್ಯವಸ್ಥಾಪಕ ನಿರ್ದೇಶಕರು | **ಅಧ್ಯಕ್ಷರು** |
| **ಶ್ರೀ ಎಚ್. ನಾಗೇಶ್,** ನಿರ್ದೇಶಕರು (ತಾಂತ್ರಿಕ) | **ಮುಖ್ಯ ಸಂಪಾದಕರು** |
| **ಶ್ರೀ ಬಿ.ಎಲ್. ಗುರುಪ್ರಸಾದ್,** ನಿರ್ದೇಶಕರು (ಹಣಕಾಸು) | **ಮುಖ್ಯ ಸಂಪಾದಕರು** |
| **ಶ್ರೀಮತಿ. ಎನ್. ಜಯಂತಿ,** ಪ್ರಧಾನ ವ್ಯವಸ್ಥಾಪಕರು(ಗ್ರಾ.ಸಂ) | **ಸಂಪಾದಕರು** |
| **ಶ್ರೀಮತಿ ಗೀತಾ ಚೌಹ್ಹಾಣ್,** ಸಾರ್ವಜನಿಕ ಸಂಪರ್ಕ ಅಧಿಕಾರಿ | **ಸಂಚಾಲಕರು** |
| **ಶ್ರೀ ಎಸ್.ಕೆ. ನಾಗರಾಜ್,** ನಿಗಮ ವ್ಯವಹಾರ (ಹಿರಿಯ ಸಹಾಯಕ) | **ಉಪ ಸಂಚಾಲಕರು** |
| **ಶ್ರೀ ಆರ್.ಎಚ್. ಲಕ್ಷ್ಮೀಪತಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ | **ಸದಸ್ಯರು** |
| **ಶ್ರೀ ಎನ್. ಪ್ರಕಾಶ್ ಕುಮಾರ್,** ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | **ಸದಸ್ಯರು** |
| **ಶ್ರೀ ರಾಮಚಂದ್ರ ರೆಡ್ಡಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | **ಸದಸ್ಯರು** |
| **ಶ್ರೀ ದಾಸ್‌ಪ್ರಕಾಶ್,** ಕವಿಪ್ರನಿನಿ ಪ. ಜಾತಿ ಮತ್ತು ಪ. ಪಂಗಡ ಕ್ಷೇಮಾಭಿವೃದ್ಧಿ ಸಂಘ | **ಸದಸ್ಯರು** |
| **ಶ್ರೀ ಎಂ. ರವೀಂದ್ರ,** ಕವಿಪ್ರನಿನಿ/ಹೆಸ್ಕಾಂಗಳ ಪ.ಜಾತಿ ಮತ್ತು ವರ್ಗದವರ ಅಧಿಕಾರಿಗಳ ಸಂಘ | **ಸದಸ್ಯರು** |
| **ಶ್ರೀ ಕುಮಾರ್ ಮುದ್ದವ್ವನವರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೊಮಾ ಇ. ಸಂಘ | **ಸದಸ್ಯರು** |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ/ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ ವಿಳಾಸ:


**ಸಾರ್ವಜನಿಕ ಸಂಪರ್ಕಾಧಿಕಾರಿ, ನಿಗಮ ಕಾರ್ಯಾಲಯ, ನೆಲಮಹಡಿ, ಬಿ. ಕಂಪನಿ, ಕೆ.ಆರ್. ವೃತ್ತ, ಬೆಂಗಳೂರು-560 001.**

ಇಮೇಲ್ ವಿಳಾಸ: **bescommagazine@gmail.com**


**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ: 1912**

**ಸಂದೇಶ ಕಳುಹಿಸಿ: 58888 ವೆಬ್‌ಸೈಟ್: www.bescom.org**


Printed at Shubhodaya Printers, Mob: 99452 77806